# ಕರ್ನಾಟಕ ಸರ್ಕಾರದ ನಡವಳಿಗಳು-

ವಿಷಯ: ಶ್ರೀ ಆರ್.ಬಿ.ಚನ್ನಬಸಣ್ಣನವರ್, ಅಂದಿನ, ಗೋಟೂರು ಗ್ರಾಮ ಪಂಚಾಯತಿ ಮತ್ತು ಶ್ರೀ ಎ.ಎ.ಹಳ್ಳೂರಿ, ಅಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಂಕಲೆ ಗ್ರಾಮ ಪಂಚಾಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರುಗಳ ವಿರುದ್ಧ ಲೋಕಾಯುಕ್ತ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 254 ಗ್ರಾಪಂಕಾ 2014, ದಿನಾಂಕ 11.11.2014
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಲೋಕ್/ಇಎನ್‌ಕ್ಯೂ/14-ಎ/588/2014/ಎಆರ್‌ಇ-9, ದಿನಾಂಕ 27.12.2017
3) ಸರ್ಕಾರದ ಸಮಸಂಖ್ಯೆಯ ಎರಡನೇ ಕಾರಣ ಕೇಳಿ ನೋಟೀಸ್, ದಿನಾಂಕ 18.01.2018
4) ಶ್ರೀ ಆರ್.ಬಿ.ಚನ್ನಬಸಣ್ಣನವರ್, ಅಂದಿನ. ಗ್ರಾಮ ಪಂಚಾಯತಿ ಕಾರ್ಯದರ್ಶಿ, ಗೋಟೂರು ಗ್ರಾಮ. ಪಂಚಾಯತಿ, ಬೆಳಗಾವಿ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಉತ್ತರ, ದಿನಾಂಕ 19 .02.2018
5) ಶ್ರೀ ಎ.ಎ.ಹಳ್ಳೂರಿ, ಅಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಂಕಲೆ ಗ್ರಾಮ ಪಂಚಾಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಉತ್ತರ, ದಿನಾಂಕ 10.02.2018

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, ಮಾನ್ಯ ಉಪಲೋಕಾಯುಕ್ತ ರವರ ದಿನಾಂಕ 27.12.2017 ರ ವರದಿಯನ್ವಯ ಶ್ರೀ ಆರ್.ಬಿ.ಚನ್ನಬಸಣ್ಣನವರ್, ಅಂದಿನ, ಗೋಟೂರು ಗ್ರಾಮ ಪಂಚಾಯತಿ ಮತ್ತು ಶ್ರೀ ಎ.ಎ.ಹಳ್ಳೂರಿ, ಅಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಂಕಲೆ ಗ್ರಾಮ ಪಂಚಾಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರುಗಳ 2010-11 ಮತ್ತು 2011-12 ನೇ ಸಾಲಿನ ಮ.ಗಾಂ.ರಾ.ಗ್ರಾ.ಉ.ಖಾತರಿ ಯೋಜನೆಯಡಿ ಎಸಗಿರುವ ಅವ್ಯವಹಾರ ಸಂಬಮಧ ಸದರಿಯವರ ವಿರುದ್ಧ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿ ದಿನಾಂಕ 11.11.2014 ರಂದು ಆದೇಶಿಸಲಾಗಿದೆ.

ಮೇಲೆ ಓದಲಾದ (2) ರಲ್ಲಿ, ಪ್ರಕರಣದ ಬಗ್ಗೆ ವಿಚಾರಣೆ ನಡೆಸಲು ಅಪರ ನಿಬಂಧಕರು, ವಿಚಾರಣೆಗಳು-9 ರವನ್ನು ತನಿಖಾಧಿಕಾರಿಯನ್ನಾಗಿ ನೇಮಿಸಿದ್ದು, ತನಿಖೆ ಕೈಗೊಂಡು ವರದಿ ಸಲ್ಲಿಸಿರುತ್ತಾರೆ. ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಸದರಿ ವರದಿಯನ್ವಯ ಮಾನ್ಯ ಉಪಲೋಕಾಯುಕ್ತರು ಸದರಿ ನೌಕರರಿಗೆ ಕೆಳಗಿನಂತೆ ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

1) ಶ್ರೀ ಆರ್. ಬಿ .ಚನ್ನಬಸಣ್ಣನವರ್, ಅಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಗೋಟೂರು ಗ್ರಾಮ ಪಂಚಾಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಸೇವೆಯಿಂದ ಕಡ್ಡಾಯ ನಿವೃತ್ತಗೊಳಿಸುವುದು ಹಾಗೂ ಸದರಿಯವರಿಗೆ ಪಾವತಿಸಲಾಗುವ ಪಿಂಚಣಿಯಲ್ಲಿ ಶೇ.50 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆ ವಿಧಿಸುವುದು..
2) ಶ್ರೀ ಎ.ಎ. ಹಳ್ಳೂರಿ, ಅಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಂಕಲೆ ಗ್ರಾಮ ಪಂಚಾಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆ ವಿಧಿಸುವುದು.

ನಿಯಮಾನುಸಾರ ಆರೋಪಿತ ನೌಕರರುಗಳಿಗೆ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಮೇಲೆ ಓದಲಾದ (3) ರಲ್ಲಿ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು. ಈ ನೋಟಿಸಿಗೆ ಸದರಿ ನೌಕರರುಗಳು ಲಿಖಿತ ಹೇಳಿಕೆ ಸಲ್ಲಿಸಿದ್ದು, ಸದರಿ ಲಿಖಿತ ಹೇಳಿಕೆಯಲ್ಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳು ಈ ಕೆಳಕಂಡಂತಿವೆ.

<u>ಶ್ರೀ ಆರ್. ಬಿ .ಚನ್ನಬಸಣ್ಣನವರ್, ಅಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ ರವರು ಸಲ್ಲಿಸಿರುವ ಆಕ್ಷೇಪಣೆಗಳು:</u>

1. ಪ್ರಕರಣದ ಬಗ್ಗೆ ಈಗಾಗಲೇ ಓಂಬುಡ್ಸ್‌ಮನ್‌ರವರು ತನಿಖೆ ನಡೆಸಿ ವಿಚಾರಣೆ ಮಾಡಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಮಾಡಲಾದ ಆಪಾದನೆಗಳು ಸಾಬೀತಾಗಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ಲೋಕಾಯುಕ್ತ ತನಿಖಾಧಿಕಾರಿಗಳು ಇದನ್ನು ಪರಿಗಣಿಸಿರುವುದಿಲ್ಲ.
2. ಫಲಾನುಭವಿಯಾದ ಅಕ್ಕವ್ವ ಪರಶುರಾಮ್ ರವರಿಗೆ ಮನೆ ನಿರ್ಮಾಣಕ್ಕೆ ರೂ.10,000/- ಮೊದಲಿಗೆ ನೀಡಿದ್ದು, ನಂತರ ರೂ.7,500/- ಗಳ ಚೆಕ್ಕನ್ನು ಸಂಬಂಧಪಟ್ಟ ಬ್ಯಾಂಕಿಗೆ ದಿನಾಂಕ 21.01.2009 ರಂದು ಜಮಾ ಮಾಡಲಾಗಿದೆ. ಫಲಾನುವಿಗಳು ಮತ್ತು ಸಂಬಂಧಿಕರ ಜಗಳದಿಂದ ಮನೆ ನಿರ್ಮಾಣ ಮುಂದುವರೆಸದಿರುವ ಹಿನ್ನೆಲೆಯಲ್ಲಿ ಸದರಿ ಹಣವನ್ನು ವಸೂಲಿ ಮಾಡಿ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿರುತ್ತದೆ.
3. ಜಾಬ್‌ಕಾರ್ಡ್‌ನಲ್ಲಿರುವ ಕುಟುಂಬದವರು ಯಾರೇ ಕೆಲಸ ಮಾಡಿದರೂ ಕೂಲಿ ಹಣವು ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ. ತನಿಖಾಧಿಕಾರಿಯವರು ಈ ಅಂಶವನ್ನು ಪರಿಗಣಿಸಿರುವುದಿಲ್ಲ.
4. ಯಾರ ಪ್ರಕರಣವನ್ನು ಆಧರಿಸಲಾಗುತ್ತದೋ ಅಂತಹ ವ್ಯಕ್ತಿಯನ್ನು ಪರೀಕ್ಷಿಸದಿದ್ದಲ್ಲಿ ಅದು ಗಂಭೀರ ವೈಫಲ್ಯವಾಗಿದ್ದು ಇದರಿಂದ ವಿಚಾರಣೆ ಅನೂರ್ಜಿತವಾಗಿರುತ್ತದೆ ಎಂದು ಉತ್ತರ ಪ್ರದೇಶ ಉಗ್ರಾಣ ನಿಗಮ ವಿರುದ್ಧ ವಿ.ಎನ್.ವಾಯಪೇಯಿ 1986/3 ಎಸ್.ಸಿ.ಸಿ. 459 ರಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತದೆ. ಈ ಪ್ರಕರಣದಲ್ಲಿ ದೂರು ನೀಡಿದ ದೂರುದಾರರ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವುದು ಅನೂರ್ಜಿತವಾಗಿರುತ್ತದೆ.
5. ವಿಚಾರಣೆ ಕಾಲದಲ್ಲಿ ದೂರುದಾರರನ್ನು ಪರೀಕ್ಷಿಸದಿದ್ದರೆ ಅವನು ಕೊಟ್ಟ ದೂರನ್ನು ದಂಡನೆಗೆ ಆಧಾರವಾಗಿ ಪರಿಗಣಿಸಬಾರದೆಂದು ರಾಮಬಾಬು ಪ್ರಕ್ಷರ್ ವಿರುದ್ಧ ಭಾರತದ ಒಕ್ಕೂಟ 1988 6 ಎಟಿಸಿ 1004 ಅಲಹಾಬಾದ್‌ನಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತದೆ. ಸದರಿ ಪ್ರಕರಣದಲ್ಲಿ ದೂರುದಾರರನ್ನು ಪರೀಕ್ಷಿಸಿರುವುದಿಲ್ಲ.
6. ಓಂಬುಡ್ಸ್‌ಮನ್‌ವರ ವಿಚಾರಣೆ ಮುಗಿದ ನಂತರ ತನಿಖೆ ಆರಂಭವಾಗಿರುವುದು ನೈಸರ್ಗಿಕ ನ್ಯಾಯಕ್ಕೆ ವಿರುದ್ಧವಾಗಿರುತ್ತದೆ. ಭಾರತೀಯ ಸಂವಿಧಾನ ಅನುಚ್ಛೇಧ 20(2) ಪ್ರಕಾರ ವ್ಯಕ್ತಿಯನ್ನು ಒಂದೇ ಅಪರಾಧಕ್ಕೆ ಎರಡು ಸಲ ಶಿಕ್ಷಿಸುವಂತಿಲ್ಲ ಎಂದು ತಿಳಿಸಲಾಗಿದೆ.
7. ಲೋಕಾಯುಕ್ತ ಕಾಯ್ದೆಯಲ್ಲಿ ತನಿಖೆಗೆ ಒಳಪಡದ ವಿಷಯಗಳಿದ್ದರೂ ತನಿಖೆಯನ್ನು ಮಾಡಿ ವಿಚಾರಣೆ ಮಾಡಿರುವುದು ನಿಯಮಕ್ಕೆ ವಿರುದ್ಧವಾಗಿರುತ್ತದೆ.
8. ಕರ್ನಾಟಕ ಗೌರವಾನ್ವಿತ ಉಚ್ಚ ನ್ಯಾಯಾಲಯದ್ದು ರಿಟ್ ಪಿಟಿಷನ್ ಸಂಖ್ಯೆ: 25078-80/2016(ಜಿಎಂ-ಕೆಎಲ್ಎ) ರಲ್ಲಿ ದಿನಾಂಕ 15.07.2016 ರಂದು ತೀರ್ಪು ನೀಡಿದ್ದು ಸದರಿ ತೀರ್ಪಿನಲ್ಲಿಯೂ ಸಹ ಲೋಕಾಯುಕ್ತ ಸಂಸ್ಥೆಯ ಕಾಯ್ದೆ 8(1)(ಎ) (ಬಿ) ರಡಿಯಲ್ಲಿ ದೂರುದಾರರಿಗೆ ಮೇಲ್ಮನವಿ ಪ್ರಾಧಿಕಾರದಿಂದ ನ್ಯಾಯ ಪಡೆಯಲು ಅವಕಾಶವಿರುವ ಕಾರಣ ಇಂತಹ ದೂರುಗಳನ್ನು ತನಿಖೆ ನಡೆಸಬಾರದು ಎಂದು ತಿಳಿಸುತ್ತಾ ಸಂಸ್ಥೆಯ 12(3) ವರದಿಗಳನ್ನು ರದ್ದುಗೊಳಿಸಿರುತ್ತಾರೆ.
9. ಲೋಕಾಯುಕ್ತ ಕಾಯ್ದೆ ನಿಯಮ 15ರ ಪ್ರಕಾರ ಈ ಪ್ರಕರಣದಲ್ಲಿ ಪೋಲಿಸ್ ಅಧೀಕ್ಷಕರಿಗೆ ತನಿಖೆಗೆ ವಹಿಸಿದ್ದು, ಪೋಲಿಸ್ ಉಪಾಧೀಕ್ಷಕರು ತನಿಖೆ ನಡೆಸಿರುತ್ತಾರೆ. ಇದು ಕಾನೂನುಬಾಹಿರವಾಗಿರುತ್ತದೆ.
10. ಮೇಲೆ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಮಾನ್ಯ ಉಪಲೋಕಾಯುಕ್ತರಿಗೆ ಇಂತಹುದೇ ದಂಡನೆಯನ್ನು ವಿಧಿಸಬಹುದೆಂದು ಕಾನೂನಿನಲ್ಲಿ ವಿವರಿಸಿಲ್ಲ. ಆದ್ದರಿಂದ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು ಒಪ್ಪಬಾರದೆಂದು ಹಾಗೂ ಯಾವುದೇ ದಂಡನೆ ವಿಧಿಸಬಾರದೆಂದು ವಿನಂತಿಸಿರುತ್ತಾರೆ.

**ಶ್ರೀ ಎ.ಎ. ಹಳ್ಳೂರಿ, ಅಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ ರವರು ಸಲ್ಲಿಸಿರುವ ಆಕ್ಷೇಪಣೆಗಳು:**

1. ಆಡಳಿತ ಮಂಡಳಿಯ ನಿರ್ಣಯದಂತೆ ಫಲಾನುಭವಿಯಾದ ಅಕ್ಕವ್ವ ಪರಶುರಾಮ್ ರವರಿಗೆ ಮನೆ ನಿರ್ಮಾಣಕ್ಕೆ ರೂ.10,000/- ಮೊದಲಿಗೆ ನೀಡಿದ್ದು, ನಂತರ ರೂ.7,500/- ಗಳ ಚೆಕ್ಕನ್ನು ಸಂಬಂಧಪಟ್ಟ ಬ್ಯಾಂಕಿಗೆ ಜಮಾ ಮಾಡಲಾಗಿದೆ. ಫಲಾನುವಿಗಳು ಮತ್ತು ಸಂಬಂಧಿಕರ ಜಗಳದಿಂದ ಮನೆ ನಿರ್ಮಾಣ ಮುಂದುವರೆಸದಿರುವ ಹಿನ್ನೆಲೆಯಲ್ಲಿ ಸದರಿ ರೂ.10,000/- ಹಣವನ್ನು ವಸೂಲಿ ಮಾಡಿ ಬ್ಯಾಂಕ್ ಖಾತೆಗೆ ದಿನಾಂಕ 05.03.2014 ರಂದು ಜಮಾ ಮಾಡಲಾಗಿರುತ್ತದೆ. ಲೋಕಾಯುಕ್ತ ವರದಿಯಲ್ಲಿ ಮನೆಯನ್ನು ಪಾಯದವರೆಗೆ ನಿರ್ಮಿಸಿರುವುದಾಗಿ ತಿಳಿಸಿದ್ದು, ಸದುದ್ದೇಶದಿಂದ ಸಹಾಯಧನ ಬಿಡುಗಡೆ ಮಾಡಿರುವುದು ಸಾಬೀತಾಗುತ್ತದೆ.
2. ಲೋಕಾಯುಕ್ತ ವರದಿಯಲ್ಲಿ ಎರಡು ಪ್ರಕರಣಗಳಿಂದ ಒಟ್ಟು ರೂ.44,500/- ಗಳನ್ನು ದುರುಪಯೋಗಪಡಿಸಿಕೊಂಡಿರುವುದಾಗಿ ತಿಳಿಸಿದ್ದು, ಬುದ್ದಾಪೂರ್ವಕವಾಗಿ ಕಾರ್ಯ ನಿರ್ವಹಿಸಿದ್ದು ನನ್ನ ವಿರುದ್ಧ ಯಾವುದೇ ದಂಡನೆಯನ್ನು ವಿಧಿಸಬಾರದೆಂದು ಮನವಿ ಮಾಡಿರುತ್ತಾರೆ.

ಶ್ರೀ. ಆರ್.ಬಿ. ಚನ್ನಬಸಣ್ಣನವರ್, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೋಟೂರು ಗ್ರಾಮ ಪಂಚಾಯಿತಿ ಮತ್ತು ಶ್ರೀ.ಎ.ಎ. ಹಳ್ಳೂರಿ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಂಕಲೆ ಗ್ರಾಮ ಪಂಚಾಯಿತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ, ಇವರು ಎರಡನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ವಿಚಾರಣಾ ವರದಿಯಲ್ಲಿನ ಅಂಶಗಳ ಹಿನ್ನೆಲೆಯಲ್ಲಿ ಪರಿಶೀಲಿಸಲಾಯಿತು. ಸದರಿಯವರು ಎತ್ತಿರುವ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ವಿಚಾರಣಾ ವರದಿಯಲ್ಲಿ ವಿವರವಾದ ಸಮರ್ಥನೆಗಳನ್ನು ನೀಡಲಾಗಿದೆ. ಸದರಿ ವಿಚಾರಣಾ ವರದಿಯ ಪ್ರಮುಖ ಅಂಶಗಳನ್ನು ಈ ಕೆಳಕಂಡಂತೆ ಪುನರುಚ್ಚರಿಸಿದೆ:-

> "8. The Ex.P9 the documents related to the Gowramma Kamate in respect of house granted under the Indira Awas Yojane for year 2010-11. Perused the said documents the DGO No.1 released the amount of Rs. 27,000/- by issuing the cheque dt 25.03.2010, 28.10.2010. as per the demand extract property No. 341 ward No. 29 Gotur the said property stands in the name of Sanju, Raju S/o Babu, Jyotiba Siddappa and said property was not stands in the name of Gowravva Sanju Kamate. The PW.1 also stated in his report Ex.P10 page No.2 as follows:
>
> > "ಸ್ಥಳ ಪರಿಶೀಲನೆ ಮಾಡಲಾಗಿ ಶ್ರೀಮತಿ. ಗೌರಮ್ಮ ಸಂಜು ಕಮತೆ ಇವರು ಯಾವುದೇ ಮನೆ ಕಟ್ಟಿರುವುದಿಲ್ಲ ಹಾಗೂ ಇವರ ಹೆಸರಿನಲ್ಲಿ ಪಂಚಾಯಿತಿಯ ಜಾಗೆಯ ಯಾವುದೇ ಉತಾರ ಇರುವುದಿಲ್ಲ. ಆದರೆ ಗ್ರಾಮ ಪಂಚಾಯಿತಿಯಿಂದ ರೂ. 27000/- ಹಣ ಫಲಾನುಭವಿಗಳಿಗೆ ನೀಡಿ ಆಗಿನ ಗೋಟೂರು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಎಂ. ಚನ್ನಬಸವಣ್ಣನವರ ಹಾಗೂ ಆಗಿನ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಲಕ್ಷ್ಮೀಬಾಯಿ ಸುರೇಶ ಶೇಖನವರ ಇವರು ಕರ್ತವ್ಯಲೋಪವೆಸಗಿರುತ್ತಾರೆ".
>
> The above said evidence clearly shows that the DGO No.1 released the amount to the said Gowramma under the said scheme even though she had not site property in her name by violating the rules and regulations prescribed in the said Vasati Yojane Scheme.

Considering the above said documents Ex.P9 report submitted by the PW.1 clearly reveals that the DGO No.1 committed the misconduct as charge levelled against him. Judgement copy in OMB/MGNREGA/CR No.275 / 13 dated 31.12.2013 produced by the DGO. In the said judgement not given findings regarding the charge levelled against the DGO in the present case. And also DGO produced the judgement in Writ Petition No. 25078-80/2016(GM-KLA) Division Bench dated: 15.07.2016 the said Judgement also not support to the DGOs to disprove the charge levelled agasint them. There is no material evidence by the side of the DGO No.1 to disprove the charge levelled against him. Thereby the DGO No.1 committed misconduct and cause loss to the state exchequer. Hence, the DGO No.1 is held responsible for Rs. 15,400/- as caused loss to the state exchequer for the bill has been raised for the amount of Rs. 5950/- Rs.3500/- and Rs. 5950/- in the name of Nijjappa Parasappa Hanchinamani, Durgappa Mallappa Hanchinamani, Parashurama Shankar Bugadikatti who were died on 12.07.2008, 25.07.2011, 18.06.2010 respectively and also held responsible for Rs. 27000/- ie., loss to the state exchequer which released in the name of Gowravva Sanju Kamate under the housing scheme even though she had no site in her name and not constructed the house.

10. The Pw.1 also stated in his report Ex.P10 in respect of the DGO No.2 as follows:

> "ಶ್ರೀಮತಿ. ಅಕ್ಕವ್ವ ಪರಶುರಾಮ ಸನದಿ (ರೂಪಚರ) ಇವರಿಗೆ ಸಬ್ 2005-06ನೇ ಸಾಲಿನಲ್ಲಿ ಆಶ್ರಯೋಜನೆಯಡಿಯಲ್ಲಿ ಮಂಜೂರಾಗಿದ್ದು ಸದರಿಯರ ಮನೆ ಪಾಯದವರೆಗೆ ಮಾತ್ರ ನಿರ್ಮಾಣವಾಗಿರುತ್ತದೆ. ಆದರೆ ಗ್ರಾಮ ಪಂಚಾಯತಿವತಿಯಿಂದ ನಿಯಮಾನುಸಾರ 7500 ಮೊದಲನೆ ಕಂತಿನ ಹಣ ಬಿಡುಗಡೆ ಮಾಡದೇ 17500/-ರೂ ಹಣವನ್ನು ಬಿಡುಗಡೆ ಮಾಡಿರುತ್ತಾರೆ. ಅಲ್ಲದೆ ಫಲಾನುಭವಿ ಹೆಸರಿನಲ್ಲಿ ಪಂಚಾಯತಿಯ ಯಾವುದೇ ನಿವೇಶನ ಇರುವುದಿಲ್ಲ. ಮತ್ತು ಹಂತ ಹಂತವಾಗಿ ಕೆಲಸ ಮಾಡಿದ ಬಗ್ಗೆ ಫೋಟೋ ತೆಗೆಸಿ-ಹಣ ಬಿಡುಗಡೆ ಮಾಡದೇ ಸುತ್ತೋಲೆಯಲ್ಲಿ ನೀಡಿದ ಷರತ್ತಿಗೆ ಹಣ ಬಿಡುಗಡೆ ಮಾಡಿದ್ದಕ್ಕೆ ಈ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ ಗೋಟುರು ಗ್ರಾಮ ಪಂಚಾಯತಿಯ ಅಧ್ಯಕ್ಷ ಶ್ರೀ. ಗುರುನಾಥ ಭ ಶಿಂಧೆ ಆಗಿನ ಕಾರ್ಯದರ್ಶಿ ಎ ಎ ಹಳ್ಳೂರು ಇವರು ಕರ್ತವ್ಯಲೋಪವೆಸಗಿರುತ್ತಾರೆ.

11. Considering the above said facts stated in Ex.P10 along with Ex.P9 documents in respect of the Smt. Akkatai Parashuram Rupachar (Sanadi). The DGO No.2 issued the cheque for Rs. 17,000/- the demand extract No.446 stands in the name of Sanadi Bhiru Bhima, the said property is not stands in the name of Akkatai who stated as beneficiaries and also there is no document to show she had constructed the house except

construction upto foundation level. These are all facts clearly reveals that the DGO No.2 had release the amount by violating the rules and regulations prescribed in respect of the said vasati yojane thereby committed the misconduct as charge levelled against him and caused loss to the state exchequer. Further, he also not produced any sufficient materials and explanation to released in the name of Akkatayi. Further PW 1 clearly stated in his report Ex.P10 regarding the responsible of the DGOs in page No.3 and 4 in his opinion. Thereby the DGO No.2 committed misconduct and causedcloss to the state exchequer for Rs. 17000/-.

12. The DGO No.2 not released the amount of Rs. 27000/- to the Smt. Gowravva Sanju Kamate but DGO No.1 Released the said amount for that the DGO No.1 is only responsible for said amount. The DGO No1 is only responsible for said amount. The DGO No.2 only released the amount Rs .17000/- in favour of the Akkavva Parashuram Sanadi ((Rupachar). Hence, the DGO No.2 held responsible for Rs. 17000/- which amount released to Akkavva Parashuram Sanadi as stated above. In total the DGO No.1 held responsible for amount of Rs. 42,400/- which amount caused loss to the state exchequer. The DGO No.2 held responsible for amount of Rs. 17000/- which amount caused loss to the state exchequer.

13. Considering the above said oral and documentary evidence with written brief, the DGOs failed to disprove the charge levelled against them but, disciplinary authority has succeeded to prove the charge levelled again them. The above said facts and circumstances clearly reveal that the DGOs have failed to maintain absolute integrity devotion to duty and acted in the manner unbecoming of a government/public servant and thereby committed misconduct as enumerated u/s 3(1) (i) to (iii) of KCS (conduct) rules, 1966.

14. In the event of the circumstances, the charges levelled against the DGOs are proved. Hence, this report is submitted to Hon'ble Upalokayuktha-1 for further action.

ಸರ್ಕಾರವು ಪರಿಶೀಲಿಸಿ, ಆರೋಪದ ತೀರ್ವತೆಗೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು: ಶ್ರೀ. ಆರ್.ಬಿ. ಚನ್ನಬಸಣ್ಣನವರ್, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೋಟೂರು ಗ್ರಾಮ ಪಂಚಾಯಿತಿ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(vi) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ **"ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ"** ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ) ಅನುಸಾರ **"ಅವರ ಪಿಂಚಣಿಯ ಶೇ. 50 ರಷ್ಟನ್ನು" ಶಾಶ್ವತವಾಗಿ ತಡೆಹಿಡಿಯುವ"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ಶ್ರೀ.ಎ.ಎ. ಹಳ್ಳೂರಿ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಂಕಲೆ ಗ್ರಾಮ ಪಂಚಾಯಿತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ. ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(vi) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ **"ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಶ್ರೀ. ಆರ್.ಬಿ. ಚನ್ನಬಸಣ್ಣನವರ್, ಅಂದಿನ, ಗೋಟೂರು ಗ್ರಾಮ ಪಂಚಾಯಿತಿ ಮತ್ತು ಶ್ರೀ.ಎ.ಎ. ಹಳ್ಳೂರಿ, ಅಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಂಕಲೆ ಗ್ರಾಮ ಪಂಚಾಯಿತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ. ಇವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ. ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ.

ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ ಶ್ರೀ. ಆರ್.ಬಿ. ಚನ್ನಬಸಣ್ಣನವರ್, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೋಟೂರು ಗ್ರಾಮ ಪಂಚಾಯಿತಿ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(vi) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ **"ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ"** ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ) ಅನುಸಾರ **"ಅವರ ಪಿಂಚಣಿಯ ಶೇ. 50 ರಷ್ಟನ್ನು" ಶಾಶ್ವತವಾಗಿ ತಡೆಹಿಡಿಯುವ"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ಶ್ರೀ.ಎ.ಎ. ಹಳ್ಳೂರಿ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಂಕಲೆ ಗ್ರಾಮ ಪಂಚಾಯಿತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ. ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(vi) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ **"ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ"** ದಂಡನೆ ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 254 ಗ್ರಾಪಂಕಾ 2014, ಬೆಂಗಳೂರು, ದಿನಾಂಕ: 07.04.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ ಶ್ರೀ. ಆರ್.ಬಿ. ಚನ್ನಬಸಣ್ಣನವರ್, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೋಟೂರು ಗ್ರಾಮ ಪಂಚಾಯಿತಿ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(vi) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ **"ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ"** ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ) ಅನುಸಾರ **"ಅವರ ಪಿಂಚಣಿಯ ಶೇ. 50 ರಷ್ಟನ್ನು" ಶಾಶ್ವತವಾಗಿ ತಡೆಹಿಡಿಯುವ"** ದಂಡನೆಯನ್ನು ಹಾಗೂ ಶ್ರೀ.ಎ.ಎ. ಹಳ್ಳೂರಿ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಂಕಲೆ ಗ್ರಾಮ ಪಂಚಾಯಿತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ. ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(vi) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ **"ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

12/4

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

4) ಅಪರ ನಿಬಂಧಕರು ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ.
6) ಕಾರ್ಯನಿರ್ವಾಹಕ ಅಧಿಕಾರಿ, ಹುಕ್ಕೇರಿ ತಾಲ್ಲೂಕು ಪಂಚಾಯತಿ, ಹುಕ್ಕೇರಿ, ಬೆಳಗಾವಿ ಜಿಲ್ಲೆ.
(ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
7) ಶ್ರೀ. ಆರ್.ಬಿ. ಚನ್ನಬಸಣ್ಣನವರ್, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೋಟೂರು ಗ್ರಾಮ ಪಂಚಾಯಿತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ.
8) ಶ್ರೀ.ಎ.ಎ. ಹಳ್ಳೂರಿ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಂಕಲೆ ಗ್ರಾಮ ಪಂಚಾಯಿತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ.
9) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.